597 ಶ್ರೀ ಸುರೇಶ್ ಬಾಬು.ಸಿ.ಬಿ. : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಹೇಮಾವತಿ ನಾಲೆಯಿಂದ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ಸಾಸಲು–ಪೆಮ್ಮಲದೇವರಹಳ್ಳಿ ಕೆರೆಗೆ ಹೇಮಾವತಿ ನೀರನ್ನು ನೈಸರ್ಗಿಕವಾಗಿ ಹರಿಸಲು ಸರ್ವೆ ಕಾರ್ಯನಡೆಸಲಾಗುತ್ತಿದೆಯೇ;

ಆ) ಸರ್ವೆಕಾರ್ಯವು ಯಾವ ಹಂತ ತಲುಪಿದೆ? ಎಷ್ಟು ದಿನಗಳಲ್ಲಿ ಈ ಕಾರ್ಯವನ್ನು ಫಲಪ್ರದಗೊಳಿಸಲಾಗುವುದು?

ಇ) ಸಾಸಲು–ಪೆಮ್ಮರದೇವರಹಳ್ಳಿ ಕೆರೆಯ ಮುಖಾಂತರ ನೈಸರ್ಗಿಕ ಹಳ್ಳದ ಮುಖಾಂತರ ಶೆಟ್ಟಿಕೆರೆ ಮತ್ತು ಸಾಲು ಕೆರೆಗಳ ಮುಖಾಂತರ ಭೋರನ ಕಣಿವೆಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿಯ ಸಾಸಲು ಪೆಮ್ಮಲದೇವರಹಳ್ಳಿ ಮತ್ತು ಶೆಟ್ಟಿಕೆರೆ ಸುತ್ತಮುತ್ತ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಇರುವುದರಿಂದ ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯಿಂದ ನೀರೊದಗಿಸುವ ಕುರಿತಂತೆ 2007–08 ನೇ ಸಾಲಿನಲ್ಲಿ ಪ್ರಾರಂಭಿಕ ಸರ್ವೆ ಮಾಡಲಾಗಿತ್ತು. ಈ ಯೋಜನೆಯಡಿ ಬರುವ ಕೆರೆಗಳಿಗೆ 130 ಎಂ.ಸಿ.ಎಫ್.ಟಿ ನೀರಿನ ಬೇಡಿಕೆಯಿದ್ದು, ಇದರ ಪ್ರಾಥಮಿಕ ತನಿಖಾ ವರದಿಯನ್ನು ತಯಾರಿಸಲಾಗಿತ್ತು.

ಈ ಮಧ್ಯೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹುಳಿಯಾರು ಹಾಗೂ ಇತರೆ ಹೋಬಳಿಗಳ ಕುಡಿಯುವ ನೀರಿನ ಸಮಸ್ಯೆ ಕುರಿತು ದಿನಾಂಕ: 16.09.2009 ರಂದು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿನ ತೀರ್ಮಾನದಂತೆ ಈಗಾಗಲೇ ಚಿಕ್ಕನಾಯಕನಹಳ್ಳಿ ಪಟ್ಟಣ ಮತ್ತು ಬಿಳಿಗೆರೆ ಗ್ರಾಮಗಳಿಗೆ ಕುಡಿಯುವ ನೀರಿಗೆ ನಿಗದಿಯಾಗಿರುವ 120 ಎಂ.ಸಿ.ಎಫ್.ಟಿ ನೀರಿನಲ್ಲಿ ಉಳಿತಾಯವಾಗ ಬಹುದಾದ ಪ್ರಮಾಣವನ್ನು ಗುರುತಿಸಿ, ಪ್ರಸ್ತುತ ಸಮಗ್ರ ಬೇಡಿಕೆ ಇರುವ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಸಲು ಪೆಮ್ಮಲದೇವರಹಳ್ಳಿ ಮತ್ತು ಶೆಟ್ಟಿಕೆರೆ ಕೆರೆಗಳಿಗೆ ನೀರು ಹರಿಸುವುದು, ಚಿಕ್ಕನಾಯಕನಹಳ್ಳಿ ತಾಲ್ಲೂಕು ಜೆ.ಸಿ.ಪುರ, ನಡುವನಹಳ್ಳಿ, ಗೋಡೆಕೆರೆ, ಬೋರಲಿಂಗನಪಾಳ್ಯ, ಪಂಕಜನಹಳ್ಳಿ,

ಮಲಗೊಂಡನಹಳ್ಳಿ, ನಾಗೇನಹಳ್ಳಿ ಗ್ರಾಮಗಳ ಕೆರೆಗಳಿಗೆ ನೀರು ಹರಿಸುವುದು ಹಾಗೂ ಈಗಿನ ಬೇಡಿಕೆಯಂತೆ ಬೋರನಕಣಿವೆ ಜಲಾಶಯದವರೆಗೂ ನೀರು ಹರಿಸುವ ಕುರಿತು ಪರಿಶೀಲಿಸಲು ಸೂಚಿಸಲಾಗಿರುತ್ತದೆ. ಅದರಂತೆ, ಸಮಗ್ರ ಯೋಜನಾ ವರದಿಯನ್ನು ತಯಾರಿಸುವ ಸಲುವಾಗಿ ವಿವರವಾದ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದೆ.

ಆ) ಸರ್ವೆ ಕಾರ್ಯವು ಪೂರ್ಣಗೊಂಡಿದ್ದು, ತಾಂತ್ರಿಕ ವರದಿ ಬಂದ ನಂತರ, ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಸಮಿತಿ, ಮಂಡಳಿ ಮುಂದೆ ಮಂಡಿಸಿ, ಮಂಡಳಿಯ ಶಿಫಾರಸ್ಸು ಅನುಸರಿಸಿ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸಲಾಗುವುದು.

ಇ) ಈ ಯೋಜನೆಯು, ಹೇಮಾವತಿ ಜಲಾಶಯದ ಮೂಲ ಯೋಜನೆಯಲ್ಲಿ ಸೇರಿರುವುದಿಲ್ಲ. ಸಾಸಲು-ಪೆಮ್ಮರದೇವರಹಳ್ಳಿ ಕೆರೆಯ ಮುಖಾಂತರ, ನೈಸರ್ಗಿಕ ಹಳ್ಳದ ಮುಖಾಂತರ ಶೆಟ್ಟಿಕೆರೆ ಮತ್ತು ಸಾಲು ಕೆರೆಗಳ ಮುಖಾಂತರ ಬೋರನ ಕಣಿವೆಗೆ ನೀರು ಹರಿಸುವ ಕುರಿತು ಪರಿಶೀಲಿಸಿ ಸಮಗ್ರ ಯೋಜನಾ ವರದಿಯನ್ನು ತಯಾರಿಸಿ ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿ ಹಾಗೂ ಮಂಡಳಿಯ ಮುಂದೆ ಮಂಡಿಸಿ, ಸದರಿ ಯೋಜನೆಗೆ ಬೇಕಾದ ನೀರಿನ ಲಭ್ಯತೆ ಆಧಾರದ ಮೇಲೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಪರಿಶೀಲಿಸ ಲಾಗುವುದು.

765 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೌಶಲ್ಯ ಅಭಿವೃದ್ಧಿ ಕೇಂದ್ರಗಳ ಮತ್ತು ಅದರ ವ್ಯಾಪ್ತಿಯಲ್ಲಿ ಬರುವ ಯೋಜನಾ ವಿವರಗಳೇನು;

ಆ) ಈವರೆವಿಗೆ ಎಷ್ಟು ಜನ ಫಲಾನುಭವಿಗಳಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರದ ಮೂಲಕ ತರಬೇತಿ ಮತ್ತು ಉದ್ಯೋಗಗಳನ್ನು ಒದಗಿಸಿಕೊಡಲಾಗಿದೆ.

ಇ) ನಿರುದ್ಯೋಗಿಗಳಿಗೆ ಹಲವಾರು ರೀತಿಯಲ್ಲಿ ನೆರವಾಗಬಲ್ಲ ಈ ಯೋಜನೆಯ ಅನುಷ್ಠಾನದ ವಿವರಗಳೇನು?